<u>ಸಾಕ್ಷಿಯನ್ನು ದಿಃ**03.06.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಬಿ.ಆರ್.ಆರ್. ವಕೀಲರಿಂದ:</u>

ವಾದಿ ಈಗ ಏನು ದಾಖಲೆ ಸಲ್ಲಿಸಿದ್ದಾರೆ ಎಂದು ಓದಿ ತಿಳಿದುಕೊಂಡಿದ್ದೇನೆ. ನಿಪಿ.5 ರಂತೆ ಕ್ರಯ ಪತ್ರದ ಆಧಾರದ ಮೇಲೆ ಮ್ಯೂಟೇಷನ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಎಂ ಆರ್ ಅನ್ನು ನಾನು ಪ್ರಶ್ನೆ ಮಾಡಿಲ್ಲ. ಸದರಿ ಎಂ ಆರ್ ನೈಜವಾಗಿದ್ದ ಕಾರಣ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

2. ನಿಪಿ.6 ರಲ್ಲಿ ಬಾಬಣ್ಣ ಅಲಿಯಾಸ್ ಮರಿ ಮತ್ತು ಜವರಯ್ಯನವರಿಗೆ ತಲಾ 7 ಗುಂಟೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಮೂದಾಗಿದೆ, ಆದರೆ ತಪ್ಪು ಇದೆ ಎಂದು ನುಡಿಯುತ್ತಾರೆ. ನಮಗೆ ಮಾರಾಟ ಮಾಡಿದ ವ್ಯಕ್ತಿಗೆ ಪಹಣಿ ಇತ್ತಾ ಎಂದು ನಾನು ನೋಡಿರುವುದಿಲ್ಲ. ಸರ್ವೆ ನಂ.36/5 ರಲ್ಲಿ ಹೊನಪ್ಪನವರಿಗೆ ಯಾವುದೇ ಭಾಗ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಭಾಗ ಬಂದಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಖರೀದಿ ಮಾಡುವುದಕ್ಕಿಂತ ಮುಂಚೆ ಪಾರಿಕತ್ ಅನ್ನು ನನ್ನ ತಂದೆಗೆ ತೋರಿಸಿ ಅವರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಪಾರಿಕತ್ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಖರೀದಿ ಪತ್ರದಲ್ಲಿ ವಿಭಾಗದಂತೆ ಬಂದ ಆಸ್ತಿ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಅದು ತನ್ನ ತಂದೆಗೆ ಗೊತ್ತು, ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಬಿ ಆಸ್ತಿಯ ಖಾತೆ 2001-02 ರವರೆಗೆ

ರಾಜಶೇಖರಯ್ಯನಿಗೆ ಮಾರಾಟ ಮಾಡಿದ ಬಾಬಣ್ಣ ಅಲಿಯಾಸ್ ಮರಿ ಯವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಸದರಿ ಬಾಬಣ್ಣ ನವರಿಗೆ ಮೂರು ಜನ ಮಕ್ಕಳು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

3. ಈ ಪ್ರಕರಣದಲ್ಲಿ ವಾದಿಗೆ ಆಗಿದೆ ಎನ್ನುವ ಕ್ರಯಪತ್ರವನ್ನು ನಾನು ಈ ದಾವೇಯಲ್ಲಿಯೇ ಪ್ರಶ್ನೆ ಮಾಡಿರುತ್ತೇನೆ. ನಾನು ಆ ರೀತಿ ಪ್ರಶ್ನೆ ಮಾಡದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ರಂತೆ ಬಾಬಣ್ಣ ಅಲಿಯಾಸ್ ಮರಿ ಯವರಿಗೆ ಮೂರು ಜನ ಮಕ್ಕಳಿಗೆ ಪಾರಿಕತ್ ನಂತೆ ಮ್ಯೂಟೇಷನ್ ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.3 ರ ಪ್ರಕಾರ ಬಾಬಣ್ಣ ಅಲಿಯಾಸ್ ಮರಿ ಮತ್ತು ಜವರಯ್ಯನಿಗೆ ತಲಾ 7 ಗುಂಟೆ ಬಂದಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಎ ಆಸ್ತಿಯಲ್ಲಿ ಮಧ್ಯಂತರ ಆದೇಶವಾದ ನಂತರ ಅದು ಖಾಲಿ ನಿವೇಶನವಾಗಿ ಇರುತ್ತದೆ ಎಂದರೆ ಸರಿ. ದಾವಾ ಎ ಆಸ್ತಿಗೂ ಮತ್ತು ನಾವು ಖರೀದಿ ಮಾಡಿದ್ದೇವೆ ಎನ್ನುವ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

_( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)_

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

.

ಕುಣಿಗಲ್.